**ಕರ್ನಾಟಕ ಸರ್ಕಾರದ ನಡವಳಿಗಳು**

*ವಿಷಯ:-* ಶ್ರೀ ಅಮೃತಕುಮಾರ ಸಾಲಂಕಿ, ಹಿಂದಿನ ಕಾರ್ಯಪಾಲಕ ಇಂಜಿನಿಯರ್, (ಹಾಲಿ ನಿವೃತ್ತ) ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ರಾಯಚೂರು ಇವರಿಗೆ ಮಾನ್ಯ ಕೆ.ಎ.ಟಿಯು ಅರ್ಜಿ ಸಂಖ್ಯೆ:5589/2011 ರಲ್ಲಿ ನೀಡಿರುವ ತೀರ್ಪಿನ ಅಂಶಗಳನ್ನು ಪರಿಗಣಿಸಿ, ಸದರಿಯವರ ವಿರುದ್ಧ ಸಾಬೀತಾದ ಆರೋಪಗಳಿಗೆ ಅನುಗುಣವಾಗಿ ದಂಡನೆ ವಿಧಿಸುವ ಬಗ್ಗೆ – ಆದೇಶ.

*ಓದಲಾಗಿದೆ:*

| | |
|---|---|
| *1* | ಸರ್ಕಾರದ ಆದೇಶ ಸಂಖ್ಯೆ:ಗ್ರಾಅಪ 05 ಇಎನ್‌ಕ್ಯೂ 2005, ದಿನಾಂಕ:18.6.2011. |
| *2* | ಕೆ.ಎ.ಟಿ ಅರ್ಜಿ ಸಂಖ್ಯೆ:5589/2011 ರಲ್ಲಿ ದಿನಾಂಕ:30.8.2018 ರಂದು ನೀಡಿರುವ ತೀರ್ಪು. |
| *3* | ಸರ್ಕಾರದ 2 ನೇ ಕಾರಣ ಕೇಳುವ ನೋಟಿಸ್ ಸಂಖ್ಯೆ:ಗ್ರಾಅಪ 603 ಜಿಪಅ 2014, ದಿನಾಂಕ:05.2.2019 |
| *4.* | ಶ್ರೀ ಅಮೃತ ಕುಮಾರ ಸಾಲಂಕಿ, ಇವರ ವಿವರಣೆ ದಿನಾಂಕ:04.11.2019. |

*ಪ್ರಸ್ತಾವನೆ:-*

ಶ್ರೀ ಅಮೃತಕುಮಾರ ಸಾಲಂಕಿ, ಇವರು 2003–04 ನೇ ಸಾಲಿನಲ್ಲಿ ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ರಾಯಚೂರು ಇಲ್ಲಿನ ಕಾರ್ಯಪಾಲಕ ಇಂಜಿನಿಯರ್ ಹುದ್ದೆಯಲ್ಲಿ ಕಾರ್ಯನಿರ್ವಹಿಸುತ್ತಿದ್ದ ಅವಧಿಯಲ್ಲಿ ಉರ್ದು ಶಾಲಾ ಕೊಠಡಿಗಳ ನಿರ್ಮಾಣದ ಉದ್ದೇಶಕ್ಕೆ ಬಿಡುಗಡೆಯಾದ ಅನುದಾನವನ್ನು ಸಕ್ಷಮ ಪ್ರಾಧಿಕಾರದ ಅನುಮೋದನೆ ಇಲ್ಲದೆ ಮಾರ್ಗಪಲ್ಲಟ ಮಾಡಿರುತ್ತಾರೆ ಎಂಬ ಆರೋಪಗಳಿಗೆ ಸಂಬಂಧಿಸಿದಂತೆ ಸದರಿಯವರ ವಿರುದ್ಧ ಕೈಗೊಳ್ಳಲಾದ ಇಲಾಖಾ ವಿಚಾರಣೆಯಲ್ಲಿ ಆರೋಪಗಳು ಸಾಭೀತಾಗಿದ್ದರಿಂದ ಮೇಲೆ ಓದಲಾದ ಕ್ರಮಾಂಕ (1) ರ ದಿನಾಂಕ:18.6.2011 ರ ಆದೇಶದಲ್ಲಿ ಸದರಿಯವರಿಗೆ ಕರ್ನಾಟಕ ನಾಗರೀಕ ಸೇವಾ (ವ.ನಿ.ಮೇ) ನಿಯಮಗಳು 1957 ರ ನಿಯಮ 8(iv-a) ರನ್ವಯ ಅವರ ಕಾಲಿಕ ವೇತನ ಶ್ರೇಣಿಯಲ್ಲಿ ಒಂದು ಹಂತವನ್ನು ಒಂದು ವರ್ಷದ ಅವಧಿಗೆ ಸಂಚಿತ ಪರಿಣಾಮ ಹೊಂದದಂತೆ ತಡೆಹಿಡಿಯುವ ದಂಡನೆ ವಿಧಿಸಲಾಗಿತ್ತು.

ಶ್ರೀ ಅಮೃತ ಕುಮಾರ ಸಾಲಂಕಿ ಇವರು ದಿನಾಂಕ:18.6.2011 ರ ಆದೇಶವನ್ನು ಪ್ರಶ್ನಿಸಿ ಮಾನ್ಯ ಕೆ.ಎ.ಟಿಯಲ್ಲಿ ಅರ್ಜಿ ಸಂಖ್ಯೆ: 5589/11 ನ್ನು ಸಲ್ಲಿಸಿದ್ದರು ಮಾನ್ಯ ಕೆ.ಎ.ಟಿಯು ದಿನಾಂಕ:5589/11 ರಂದು ಈ ಕೆಳಕಂಡಂತೆ ಅಂತಿಮ ಆದೇಶ ಹೊರಡಿಸಿರುತ್ತದೆ:-

**" The application is allowed and the impugned order dated:18.6.2011 at Annexure –A10 passed by the Government in so far as it relates to the present applicant is concerned, stands quashed.**

**The matter is remitted to the Government to pass appropriate orders keeping in mind the law laid in the case of Punjab National Bank &Others Vs. Kunj Behari Misra by issuing appropriate 2nd Show cause notice Within a period of six months from the dated of receipt of the copy of this order. If it intends to proceed further"**

ಮಾನ್ಯ ಕರ್ನಾಟಕ ಆಡಳಿತ ನ್ಯಾಯ ಮಂಡಳಿಯ ತೀರ್ಪನ್ನು ಗಣನೆಗೆ ತೆಗೆದುಕೊಂಡು ವಿಚಾರಣಾ ವರದಿಯನ್ನು ಪುನರ್ ಪರಿಶೀಲಿಸಿ, ಪ್ರಸಕ್ತ ಪ್ರಕರಣದಲ್ಲಿ ಶಿಸ್ತುಪ್ರಾಧಿಕಾರದ ನಿರ್ಣಯಗಳನ್ನು ಸ್ಪಷ್ಟವಾಗಿ ದಾಖಲಿಸಿ, ಮೇಲೆ ಓದಲಾದ ಕ್ರಮಾಂಕ (3) ರಲ್ಲಿ 2 ನೇ ಕಾರಣ ಕೇಳುವ ನೋಟಿಸ್ ಜಾರಿ ಮಾಡಲಾಗಿರುತ್ತದೆ. ಅದಕ್ಕೆ ಪ್ರತಿಯಾಗಿ ಶ್ರೀ ಅಮೃತ ಕುಮಾರ ಸಾಲಂಕಿ ಇವರು ಮೇಲೆ ಓದಲಾದ ಕ್ರಮಾಂಕ (4) ರಲ್ಲಿ ತಮ್ಮ ವಿವರಣೆಯನ್ನು ಸಲ್ಲಿಸಿ, ಈ ಪ್ರಕರಣವನ್ನು ಮುಕ್ತಾಯ ಮಾಡುವಂತೆ ಕೋರಿರುತ್ತಾರೆ.

ಸರ್ಕಾರವು ಶಿಸ್ತು ಪ್ರಾಧಿಕಾರದ ನಿರ್ಣಯಗಳು ಹಾಗೂ ಅದಕ್ಕೆ ಸಂಬಂಧಿಸಿದಂತೆ ಸದರಿಯವರು ಸಲ್ಲಿಸಿರುವ ಲಿಖಿತ ಹೇಳಿಕೆಗಳನ್ನು ಪ್ರಕರಣಗಳ ಸಂಗತಿಗಳೊಂದಿಗೆ ಪರಿಶೀಲಿಸಿರುತ್ತದೆ. ಶ್ರೀ ಅಮೃತ ಕುಮಾರ ಸಾಲಂಕಿ ಇವರಿಗೆ ಜಾರಿ ಮಾಡಲಾದ 2 ನೇ ಕಾರಣ ಕೇಳುವ ನೋಟಿಸ್‌ನಲ್ಲಿ ಮಾನ್ಯ ಕೆ.ಎ.ಟಿಯು ಅಭಿಪ್ರಾಯ ಪಟ್ಟಿರುವಂತೆ ಶಿಸ್ತು ಪ್ರಾಧಿಕಾರದ ನಿರ್ಣಯಗಳನ್ನು ಸ್ಪಷ್ಟವಾಗಿ ದಾಖಲಿಸಲಾಗಿದೆ. ಅದರ ಸಂಕ್ಷಿಪ್ತ ವಿವರಗಳೆಂದರೆ, ಸರ್ಕಾರಿ ಉರ್ದು ಪ್ರಾಥಮಿಕ ಶಾಲೆಗಳಿಗೆ ಹೆಚ್ಚುವರಿ ಕಟ್ಟಡ ನಿರ್ಮಾಣಕ್ಕೆ ಮಂಜೂರಾಗಿದ್ದ ರೂ.13.50 ಲಕ್ಷ ಹಣವನ್ನು ಸದರಿ ಉದ್ದೇಶಕ್ಕೆ ನೀಡಿದ್ದರೂ ಸಹ ಸಂಬಂಧಿಸಿದ ಅಳತೆ ಪುಸ್ತಕದಲ್ಲಿ ಮಂಜೂರಾದ ಕಾಮಗಾರಿ ಅನುಷ್ಠಾನಗೊಳಿಸಿದಂತೆ ಸುಳ್ಳು ವಿವರಗಳನ್ನು ದಾಖಲಿಸಿ ಸುಳ್ಳು ಹಣ ಬಳಕೆ ಪ್ರಮಾಣ ಪತ್ರ ಸಲ್ಲಿಸಿರುವ ಬಗ್ಗೆ ಮತ್ತು ಸದರಿ ಮೊತ್ತವನ್ನು ಈಗಾಗಲೇ ಅನುಷ್ಠಾನಗೊಂಡಿದ್ದ ಈ ಕೆಳಕಂಡ ಕಾಮಗಾರಿಗಳಿಗೆ ಪಾವತಿಸಿರುವ ಆರೋಪಗಳನ್ನು ಆರೋಪಿತರ ವಿರುದ್ಧ ಮಾಡಿರುವುದಾಗಿದೆ:-

| ಕ್ರ.ಸಂ. | ಕಾಮಗಾರಿಯ ವಿವರ | ಮೊತ್ತ |
|---|---|---|
| 1 | 2002-03 ನೇ ಸಾಲಿನ ಉರ್ದು ಶಾಲಾ ಕಟ್ಟಡದ ಬಿಲ್‌ಗಳನ್ನು ಪಾವತಿಸಿದ್ದು | 4,41,159/- |
| 2 | ಹಿಂದುಳಿದ ವರ್ಗಗಳ ವಸತಿ ನಿಲಯಕ್ಕಾಗಿ | 1,76,787/- |
| 3 | ತೋಟಗಾರಿಕೆ ಇಲಾಖೆಯ ಕಟ್ಟಡಕ್ಕಾಗಿ | 60,032/- |
| 4 | ಪ್ರಾಥಮಿಕ ಆರೋಗ್ಯ ಕೇಂದ್ರದ ನೀರು ಸರಬರಾಜುವಿಗಾಗಿ | 30,000/- |
| 5 | ಪ್ರಧಾನ ಮಂತ್ರಿ ಗ್ರಾಮೀಣಾ ಯೋಜನೆಯ ಶಿಕ್ಷಣ ಇಲಾಖೆಯ ಕಟ್ಟಡಕ್ಕಾಗಿ | 21,052/- |
| 6 | ಯಾಪಲದಿನ್ನಿ ಗ್ರಾಮದಲ್ಲಿ ವಿಜ್ಞಾನ ಕೇಂದ್ರಕ್ಕೆ ಮಾಹಿತಿ ಸಿಂಧು ಯೋಜನೆಯ ಕಟ್ಟಡಕ್ಕಾಗಿ | 77,500/- |
| 7 | ಪ್ರಧಾನ ಮಂತ್ರಿ ಗ್ರಾಮೀಣ ಯೋಜನೆಯ ಆರೋಗ್ಯ ಇಲಾಖೆಯ ಕಟ್ಟಡಕ್ಕಾಗಿ | 94,865/- |
| 8 | ಪರಿಶಿಷ್ಟ ಜಾತಿ ಪರಿಶಿಷ್ಟ ಪಂಗಡದ ಸಮುದಾಯ ನಿರ್ಮಾಣದ ಕಾಮಗಾರಿಗಾಗಿ | 24,578/- |
| 9 | ಪ್ರಾಥಮಿಕ ಶಾಲಾ ಕಟ್ಟಡ | 3,93,090/- |
| 10 | ಶಾಲಾ ಕಟ್ಟಡ | 31,240/- |

ಶ್ರೀ ಅಮೃತಕುಮಾರ ಸಾಲಂಕಿ ಇವರು ಉರ್ದು ಶಾಲಾ ಕಟ್ಟಡ ನಿರ್ಮಾಣಕ್ಕೆ ರೂ.13.50 ಲಕ್ಷಗಳನ್ನು ಖರ್ಚು ಮಾಡಲಾಗಿದೆ ಎಂದು ಪ್ರಾಮಾಣೀಕರಿಸಿ, ಸ್ವತಃ ಹಣ ಬಳಕೆ ಪ್ರಮಾಣ ಪತ್ರವನ್ನು ಸಹಿಯೊಂದಿಗೆ ಸಲ್ಲಿಸಿರುವುದು ಸ್ಪಷ್ಟವಿರುತ್ತದೆಯೆಂದು, ಈ ಪ್ರಕರಣದಲ್ಲಿನ ಮತ್ತೊಬ್ಬ ಆರೋಪಿತರಾದ ಶ್ರೀ ವಿ.ಜೆ.ರಾಯ್ಕರ್, ಇವರು ದಿನಾಂಕ:11.4.2005 ರಂದು ಸಲ್ಲಿಸಿರುವ ಹೇಳಿಕೆಯಲ್ಲಿ 2003-04 ನೇ ಸಾಲಿನಲ್ಲಿ ರಾಯಚೂರು ತಾಲ್ಲೂಕಿನಲ್ಲಿ ಒಂಭತ್ತು ಉರ್ದು ಶಾಲೆ ಕೊಠಡಿಗಳನ್ನು ನಿರ್ಮಿಸಲು ರೂ.13.50ಲಕ್ಷಗಳನ್ನು 2004 ರ ಫೆಬ್ರವರಿ ಮತ್ತು ಮಾರ್ಚ್ ತಿಂಗಳಲ್ಲಿ ಬಿಡುಗಡೆಗೊಳಿಸಲಾಗಿತ್ತೆಂದು, ಸದರಿ ಹಣ ಭರವಸೆ ಪತ್ರವನ್ನು ದಿನಾಂಕ:31.3.2004 ರೊಳಗೆ ಉಪಯೋಗಿಸಬೇಕಾಗಿರುತ್ತದೆಯೆಂದು, ಸದರಿ ಒಂಭತ್ತು ಕಾಮಗಾರಿಗಳ ನಿವೇಶನ ಹಾಗೂ ಅಂದಾಜು ಪತ್ರಿಕೆಗಳು ಇನ್ನು ತಯಾರಿಸುವ ಹಂತದಲ್ಲಿದ್ದು ಈ ಹಣವನ್ನು ದಿನಾಂಕ:31.3.2004 ರೊಳಗಾಗಿ ಸದರಿ ಕಾಮಗಾರಿಗಳಿಗೆ ಉಪಯೋಗಿಸಲು ಬಾರದಿದ್ದರಿಂದ ಈ ಬಗ್ಗೆ

ಕಾರ್ಯಪಾಲಕ ಇಂಜಿನಿಯರ್‌ರಾದ ಇವರು ಲೆಕ್ಕಾಧೀಕ್ಷಕರು, ಪಂ.ರಾ.ಇಂ ವಿಭಾಗ, ಇವರೊಡನೆ ಚರ್ಚಿಸಿ 2002-03 ಸಾಲಿನಲ್ಲಿ ಮಂಜೂರಾದ ಉರ್ದು ಶಾಲೆಗಳ ಬಿಲ್‌ಗಳಿಗೆ ಉಪಯೋಗಿಸಲು ಹಾಗೂ ಇನ್ನುಳಿದ ಶಾಲಾ ಕಟ್ಟಡಗಳು ಹಾಗೂ ಇತರೆ ಕಾಮಗಾರಿಗಳಿಗೆ ಹಣ ಪಾವತಿಯಾಗದೇ ಇರುವ ಬಾಕಿ ಬಿಲ್‌ಗಳನ್ನು ಪಾವತಿ ಮಾಡಲು ಸೂಚಿಸಿರುವರು ಅದರಂತೆ ರೂ.13.50 ಲಕ್ಷವನ್ನು 2002-03 ನೇ ಸಾಲಿನ ಉರ್ದು ಶಾಲಾ ಕಟ್ಟಡಗಳಿಗೆ ಹಾಗೂ ಶಿಕ್ಷಣ ಇಲಾಖೆಯ ಇನ್ನಿತರ ಕಾಮಗಾರಿಗಳಿಗೆ ಈ ಹಿಂದೆ ಮಾರ್ಗಪಲ್ಲಟ ಮಾಡಿದ ಶೀರ್ಷಿಕೆಯನ್ನು ಸರಿಹೊಂದಿಸಿ ಪಾವತಿಸಲಾಗಿದೆ ಎಂದು ತಿಳಿಸಿರುತ್ತಾರೆಂದು, ಸದರಿ ಅಂಶಗಳನ್ನು ಗಮನಿಸಲಾಗಿ, ನಿಗದಿತ ಉದ್ದೇಶಕ್ಕೆ ಬಿಡುಗಡೆಯಾದ ಅನುದಾನವನ್ನು ಸದರಿ ಉದ್ದೇಶಕ್ಕೆ ಬಳಕೆ ಮಾಡಿರುವಂತೆ ಸುಳ್ಳು ಬಳಕೆ ಪ್ರಮಾಣ ಪತ್ರವನ್ನು ಆಪಾದಿತರು ಸಲ್ಲಿಸಿರುವ ಹಾಗೂ ಸದರಿ ಮೊತ್ತವನ್ನು ಬೇರೆ ಯೋಜನೆಯ ಕಾಮಗಾರಿಗಳಿಗೆ ಪಾವತಿ ಮಾಡಿರುವುದು ಸ್ಪಷ್ಟ ಇರುತ್ತದೆಯೆಂದು, ಈ ಎಲ್ಲಾ ಅಂಶಗಳನ್ನು ವಿಚಾರಣಾ ಸಂದರ್ಭದಲ್ಲಿ ಮಂಡಿಸಿದ್ದರೂ ಸಹ ವಿಚಾರಣಾಧಿಕಾರಿಯವರು ಈ ಯಾವುದೇ ಅಂಶಗಳನ್ನು ಸಮಗ್ರವಾಗಿ ಪರಿಶೀಲಿಸದೆ ಆರೋಪಗಳು ಸಾಭೀತಾಗಿರುವುದಿಲ್ಲವೆಂಬ ನಿರ್ಣಯಕ್ಕೆ ಬಂದಿರುವುದು ಸಮಂಜಸವಾಗಿಲ್ಲ ಎಂಬ ನಿರ್ಣಯಗಳನ್ನು ಸ್ಪಷ್ಟಪಡಿಸಿ, 2 ನೇ ಕಾರಣ ಕೇಳುವ ನೋಟಿಸ್‌ನ್ನು ಶ್ರೀ ಅಮೃತ ಕುಮಾರ ಸಾಲಂಕಿ ಇವರಿಗೆ ಜಾರಿ ಮಾಡಲಾಗಿರುತ್ತದೆ.

ಸದರಿಯವರಿಗೆ ಜಾರಿ ಮಾಡಿದ 2 ನೇ ಕಾರಣ ಕೇಳುವ ನೋಟಿಸ್‌ಗೆ ಪ್ರತಿಯಾಗಿ ಸಲ್ಲಿಸಿರುವ ವಿವರಣೆಯಲ್ಲಿ ಈ ಪ್ರಕರಣದಲ್ಲಿ ಸ.ಕಾ.ಇಂ ಇವರ ವಿರುದ್ಧ ಹಣ ಪಾವತಿ ಮತ್ತು ಅನುದಾನ ಬಳಕೆಯ ವಿಷಯಕ್ಕೆ ಸಂಬಂಧಿಸಿದಂತೆ ವಿಚಾರಣೆಗೆ ಒಳಪಡಿಸುವ ಅಗತ್ಯವಿರುತ್ತದೆಯೆಂದು, ಸ.ಕಾ.ಇಂ ಆದ ಶ್ರೀ ವಿ.ಜಿ.ರಾಯ್ಕರ್, ಇವರು ಮೌಖಿಕ ಆದೇಶದ ಮೂಲಕ ಅನುದಾನ ಸ್ಥಾನಪಲ್ಲಟ ಮಾಡಲಾಗಿದೆ ಎಂದು ತಿಳಿಸಿರುವುದು ನಿಯಮಬಾಹಿರ ಹಾಗೂ ಸತ್ಯಕ್ಕೆ ದೂರವಾದ ಸಂಗತಿಯಾಗಿರುತ್ತದೆಯೆಂದು, ಸದರಿ ವಿಷಯದ ಬಗ್ಗೆ ಸ.ಕಾ.ಇಂ ರವರಿಗೆ ಯಾವುದೇ ಮೌಖಿಕ ಸೂಚನೆಗಳನ್ನು ನೀಡಿರುವುದಿಲ್ಲವೆಂದು, ಸ.ಕಾ.ಇಂ ರವರು ಸತ್ಯವನ್ನು ಮರೆಮಾಚಿ ತಮ್ಮ ಮೇಲೆ ಆರೋಪಗಳನ್ನು ಹೊರಿಸಿರುತ್ತಾರೆಂದು, ಸದರಿಯವರು ಸಲ್ಲಿಸಿದ ಹಣ ಬಳಕೆಯ ಪ್ರಮಾಣ ಪತ್ರದ ಆಧಾರದ ಮೇಲೆ ತಾವು ಹಣ ಬಳಕೆ ಪ್ರಮಾಣ ಪತ್ರವನ್ನು ಸಲ್ಲಿಸಿದ್ದೇನೆಂದು ತಿಳಿಸಿರುತ್ತಾರೆ. ಮುಂದುವರಿದು, ಈ ಪ್ರಕರಣದಲ್ಲಿ ಈಗಾಗಲೇ ನಿವೃತ್ತ ಜಿಲ್ಲಾ ನ್ಯಾಯಾಧೀಶರು ವಿಚಾರಣೆ ನಡೆಸಿ ವರದಿ ಸಲ್ಲಿಸಿದ್ದು, ಸದರಿ ವರದಿಯಲ್ಲಿ ಆರೋಪಗಳು ಸಾಭಿತಾಗಿರುವುದಿಲ್ಲವೆಂದು, ಸಿ.ಓ.ಡಿ ತನಿಖೆಯಿಂದಲೂ ತಮ್ಮ ವಿರುದ್ಧ ಆರೋಪಗಳು ಸಾಭೀತಾಗಿರುವುದಿಲ್ಲವೆಂದು ತಿಳಿಸಿರುತ್ತಾರೆ. ಪ್ರಕರಣವು 16 ವರ್ಷಗಳ ಹಿಂದೆ ನಡೆದಿದ್ದು, ಈಗ 2 ನೇ ಕಾರಣ ಕೇಳುವ ನೋಟಿಸ್ ಜಾರಿ ಮಾಡಿರುವುದು ನೋವಿನ ಸಂಗತಿಯಾಗಿರುತ್ತದೆಯೆಂದು ತಿಳಿಸಿ ತಮ್ಮನ್ನು ಆರೋಪಗಳಿಂದ ಕೈ ಬಿಡುವಂತೆ ಕೋರಿರುತ್ತಾರೆ.

ಶ್ರೀ ಅಮೃತಕುಮಾರ ಸಾಲಂಕಿ ಇವರಿಗೆ ದಿನಾಂಕ:05.2.2019 ರಂದು ಜಾರಿ ಮಾಡಲಾದ 2 ನೇ ಕಾರಣ ಕೇಳುವ ನೋಟಿಸ್‌ನಲ್ಲಿ ಅವರ ವಿರುದ್ಧ ಸಾಭೀತಾಗುವ ಆರೋಪಗಳನ್ನು ಸ್ಪಷ್ಟವಾಗಿ ನಮೂದಿಸಲಾಗಿದೆ. ಅಂದಿನ ಸ.ಕಾ.ಇಂ ಆಗಿದ್ದ ಶ್ರೀ ವಿ.ಜಿ.ರಾಯ್ಕರ್, ಇವರು ಕಾರ್ಯಪಾಲಕ ಇಂಜಿನಿಯರ್ ಇವರ ಮೌಖಿಕ ಸೂಚನೆಯನುಸಾರ ಕ್ರಮವಹಿಸಲಾಗಿದೆ ಎಂದು ತಿಳಿಸಿದ್ದರು. ಶ್ರೀ ವಿ.ಜಿ.ರಾಯ್ಕರ್, ಹಿಂದಿನ ಸ.ಕಾ.ಇಂ ಇವರ ವಿರುದ್ಧ ಈಗಾಗಲೇ ದಿನಾಂಕ:18.6.2011 ರ ಆದೇಶದಲ್ಲಿ ದಂಡನೆ ವಿಧಿಸಲಾಗಿದೆ. ಶ್ರೀ ಅಮೃತ ಕುಮಾರ ಸಾಲಂಕಿ ಇವರು ಸಲ್ಲಿಸಿರುವ ವಿವರಣೆಯಲ್ಲಿ ಸ.ಕಾ.ಇಂ ಇವರು ತಮ್ಮ ವಿರುದ್ಧ ನೀಡಿರುವ ಹೇಳಿಕೆಯು ಸತ್ಯಾಂಶದಿಂದ ಕೂಡಿರುವುದಿಲ್ಲವೆಂದು ಸದರಿಯವರು ಸಲ್ಲಿಸಿದ್ದ ಹಣ ಬಳಕೆ ಪ್ರಮಾಣ ಪತ್ರವನ್ನು ಆಧರಿಸಿ, ಹಣ ಬಳಕೆ ಪ್ರಮಾಣ ಪತ್ರವನ್ನು ಸಲ್ಲಿಸಿರುತ್ತೇನೆಂದು ತಿಳಿಸಿದ್ದರೂ, ಲೋಕೋಪಯೋಗಿ ಇಲಾಖೆಯ ಸಂಹಿತೆಯನುಸಾರ ಕಾರ್ಯಪಾಲಕ ಇಂಜಿನಿಯರ್ ಇವರು ಕಾಮಗಾರಿಗಳಿಗೆ ಹಣ ಪಾವತಿಸುವ ಪೂರ್ವದಲ್ಲಿ ಶೇ 25% ರಷ್ಟು ಖುದ್ದು ಕಾಮಗಾರಿ ತಪಾಸಣೆ

ನಡೆಸುವ ಜವಾಬ್ದಾರಿಯನ್ನು ಹೊಂದಿದ್ದು, ಸ.ಕಾ.ಇಂ ಇವರು ಸಲ್ಲಿಸಿದ್ದ ಹಣ ಬಳಕೆ ಪ್ರಮಾಣ ಪತ್ರಗಳ ಅನುಸಾರ ಅನುಷ್ಠಾನ ಮಾಡಿರುವ ಕಾಮಗಾರಿಗಳು ಯಾವುವು ಎಂಬ ಬಗ್ಗೆ ಪರಿಶೀಲನೆ ನಡೆಸುವ ಜವಾಬ್ದಾರಿಯನ್ನು ಸದರಿಯವರು ಹೊಂದಿದ್ದರೂ ಸಹ ಸ.ಕಾ.ಇಂ ರವರು ಸಲ್ಲಿಸಿದ ಹಣ ಬಳಕೆ ಪ್ರಮಾಣ ಪತ್ರವನ್ನು ಆಧರಿಸಿ ಹಣ ಬಳಕೆ ಪ್ರಮಾಣ ಪತ್ರವನ್ನು ಸಲ್ಲಿಸಿರುತ್ತೇನೆ ಎಂದು ತಿಳಿಸಿರುವುದು ಅವರ ಕರ್ತವ್ಯ ನಿರ್ಲಕ್ಷತೆಯನ್ನು ಸ್ಪಷ್ಟ ಪಡಿಸುತ್ತದೆ. ಇದರಿಂದ ಸ.ಕಾ.ಇಂರವರು ಸಲ್ಲಿಸಿದ್ದ ಹಣ ಬಳಕೆ ಪ್ರಮಾಣ ಪತ್ರದಲ್ಲಿ ಒಳಗೊಂಡಿದ್ದ ಕಾಮಗಾರಿಗಳನ್ನು ಖುದ್ದು ತಪಾಸಣೆ ನಡೆಸದೆ ಕರ್ತವ್ಯ ಲೋಪವೆಸಗಿರುವ ಆರೋಪವು ಸದರಿಯವರ ವಿರುದ್ದ ಸಾಭೀತಾಗಿರುತ್ತದೆ. ಆದ್ದರಿಂದ, ಶ್ರೀ ಅಮೃತಕುಮಾರ ಸಾಲಂಕಿ ಇವರು ಸ.ಕಾ.ಇಂ ಆದ ಶ್ರೀ ವಿ.ಜೆ.ರಾಯ್ಕರ್ ಇವರೊಂದಿಗೆ ಶಾಮೀಲಾಗಿ, ನಿಗಧಿತ ಉದ್ದೇಶಕ್ಕೆ ಬಿಡುಗಡೆಯಾದ ಹಣವನ್ನು ಈ ಹಿಂದೆಯೇ ಅನುಷ್ಠಾನಗೊಳಿಸಿದ್ದ ಕಾಮಗಾರಿಗಳಿಗೆ ಪಾವತಿ ಮಾಡಿ, ನಿಗಧಿತ ಉದ್ದೇಶಕ್ಕೆ ವೆಚ್ಚ ಮಾಡಲಾಗಿದೆ ಎಂದು ಸುಳ್ಳು ವಿವರಗಳನ್ನು ನಮೂದಿಸಿ ಹಣ ಬಳಕೆ ಪ್ರಮಾಣ ಪತ್ರವನ್ನು ಸಲ್ಲಿಸಿ, ಕರ್ತವ್ಯ ಲೋಪವೆಸಗಿರುವ ಆರೋಪವು ಸದರಿಯವರ ವಿರುದ್ದ ಸ್ಪಷ್ಟವಾಗಿ ಸಾಭೀತಾಗಿರುತ್ತದೆ. ಆದ್ದರಿಂದ, ಶ್ರೀಯುತರ ವಿರುದ್ದ ಸಾಭೀತಾದ ಆರೋಪದ ಗಂಭೀರತೆಗೆ ಅನುಗುಣವಾಗಿ ದಂಡನೆ ವಿಧಿಸಲು ಸರ್ಕಾರವು ನಿರ್ಣಯಿಸಿ ಈ ಕೆಳಕಂಡಂತೆ ಆದೇಶಿಸಿದೆ.

**ಆದೇಶ ಸಂಖ್ಯೆ:ಗ್ರಾಅಪ 603 ಜಿಪಅ 14, ಬೆಂಗಳೂರು, ದಿನಾಂಕ:04.01.2020**

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳ ಹಿನ್ನೆಲೆಯಲ್ಲಿ, ಸರ್ಕಾರವು ಶ್ರೀ ಅಮೃತ ಕುಮಾರ ಸಾಲಂಕಿ, ಹಿಂದಿನ ಕಾರ್ಯಪಾಲಕ ಇಂಜಿನಿಯರ್, ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ರಾಯಚೂರು (ಹಾಲಿ ನಿವೃತ್ತ) ಇವರ ವಿರುದ್ದ ಸಾಭೀತಾದ ಆರೋಪಗಳಿಗೆ ಅನುಗುಣವಾಗಿ ಕರ್ನಾಟಕ ನಾಗರೀಕ ಸೇವಾ ನಿಯಮಗಳು 1958 ರ ನಿಯಮ 214 (1) (ಎ) ರನ್ವಯ ಅವರ ನಿವೃತ್ತಿ ವೇತನದಲ್ಲಿ ಪ್ರತಿ ತಿಂಗಳು ರೂ.1,000 (ಒಂದು ಸಾವಿರ ರೂಪಾಯಿಗಳು ಮಾತ್ರ) ಗಳನ್ನು ಒಂದು ವರ್ಷದ ಅವಧಿಗೆ ಕಡಿತಗೊಳಿಸುವ ದಂಡನೆ ವಿಧಿಸಿ, ಆದೇಶಿಸಿದೆ.

ಕರ್ನಾಟಕ ರಾಜ್ಯ ಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

04/01/2020

(ಎಸ್.ರಂಗನಗೌಡ)
ಸರ್ಕಾರದ ಅಧೀನ ಕಾರ್ಯದರ್ಶಿ(ಸೇವೆಗಳು-ಎ)
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.

ಇವರಿಗೆ:

1. ಮಹಾಲೇಖಪಾಲರು,(ಲೆಕ್ಕ ಪತ್ರ 1&2)/(ಆಡಿಟ್) ಕರ್ನಾಟಕ, ಬೆಂಗಳೂರು.
2. ಮುಖ್ಯ ಇಂಜಿನಿಯರ್, ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆ, ಬೆಂಗಳೂರು.
3. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತ್, ರಾಯಚೂರು.
4. ಮುಖ್ಯ ಇಂಜಿನಿಯರ್, ಸಂಪರ್ಕ ಮತ್ತು ಕಟ್ಟಡಗಳು, ಕೆ.ಆರ್.ವೃತ್ತ, ಬೆಂಗಳೂರು.
5. ಸರ್ಕಾರದ ಅಧೀನ ಕಾರ್ಯದರ್ಶಿ, ಲೋಕೋಪಯೋಗಿ, ಬಂದರು ಮತ್ತು ಒಳನಾಡು ಜಲ ಸಾರಿಗೆ ಇಲಾಖೆ, (ಸೇವೆಗಳು-ಎ ಮತ್ತು ಸಿ).
6. ಶ್ರೀ ಅಮೃತ ಕುಮಾರ ಸಾಲಂಕಿ, ನಿವೃತ್ತ ಕಾರ್ಯಪಾಲಕ ಇಂಜಿನಿಯರ್, ನಂಬರ್ 589, 21 ನೇ ಮುಖ್ಯ ರಸ್ತೆ, 2ನೇ ಮಹಡಿ, 4 ನೇ 'ಟಿ' ಬಡಾವಣೆ, ಜಯನಗರ, ಬೆಂಗಳೂರು.
7. ಮಾನ್ಯ ಗ್ರಾ.ಅ.ಪಂ.ರಾಜ್ ಸಚಿವರ ಆಪ್ತ ಕಾರ್ಯದರ್ಶಿ.
8. ಗ್ರಾ.ಅ.ಪಂ.ರಾಜ್ ಇಲಾಖೆಯ ಪ್ರಧಾನ ಕಾರ್ಯದರ್ಶಿ/ಉಪಕಾರ್ಯದರ್ಶಿ/ಇವರ ಆಪ್ತ ಕಾರ್ಯದರ್ಶಿ/ಆಪ್ತ ಸಹಾಯಕರು
9. ಶಾಖಾ ರಕ್ಷಾ ಕಡತ/ಕಂಪ್ಯೂಟರ್ ಸೆಲ್/ ಹೆಚ್ಚುವರಿ ಪ್ರತಿ.